

ಮುಂಜಾನೆ ಗಿರಿಯು ಮೈತುಂಬ ಹೊದ್ದ ಹಿಮದ ಕೌದಿ ಮಧ್ಯಾಹ್ನವಾಗುತ್ತಿರುವಂತೆಯೇ ಕರಗಿ ಹರಿದು ಹೋಗುತ್ತದೆ



ರಾಮಕಲಿ ಠಾಕೂರ್

ಸಣ್ಣ ಸಣ್ಣ ಗುಡ್ಡಗಳ ಮೈಮೇಲೆಲ್ಲ ಹಿಮ ಬಿದ್ದು ಕುಫ್ರಿಯ ಬೆಟ್ಟಗಳು ನಿಸರ್ಗವೇ ಕಡೆದಿಟ್ಟ ಕುಲ್ಫಿಯ ಹಾಗೆ ಕಾಣುತ್ತಿದ್ದವು.

ಹಗ್ಗದಲ್ಲಿ ಗುಡ್ಡದ ಒಂದು ತುದಿಯಿಂದ ಮತ್ತೊಂದು ತುದಿಗೆ ಜಾರುವ, ಹಗ್ಗ ಬಳಸಿ ಹತ್ತುವ, ಹಗ್ಗದ ಮೇಲೆ ನಡೆದು ಕೆಳಕ್ಕೆ ಬಲೆಯಲ್ಲಿ ಜಿಗಿಯುವ – ಹೀಗೆ ಬಗೆ ಬಗೆಯ ಸಾಹಸದಾಟಗಳು ಇದ್ದವು. ಎತ್ತರ ಪ್ರದೇಶದಿಂದ ಕೆಳಗೆ ನೋಡಿದರೆ ತಲೆ ಸುತ್ತಿ ಬರುವ ಹಾಗೇ ಆಗುವ ನನಗೆ ಒಂದು ತುದಿಯಿಂದ ಮತ್ತೊಂದು ತುದಿಗೆ ಹಗ್ಗದಲ್ಲಿ ಜೋರು ಜಾರಿದ್ದೇ ದೊಡ್ಡ ಪುಳಕ.

ಇಷ್ಟೊತ್ತಿಗಾಗಲೇ ಅಸಾಧ್ಯ ಹಸಿವು. ತಣ್ಣಗೆ ಗಾಳಿ ಬೀಸಲಾರಂಭಿಸಿತು. ಆಕಾಶದಲ್ಲಿ ಗುಡು ಗುಡು ಗುಮ್ಮಟರಾಯ ಬಾಗಿಲು ಬಡಿಯುವ ಸದ್ದಾಯಿತು. ನಾವು ಆಡುತ್ತಿದ್ದ ಜಾಗದಿಂದ ತುಸು ದೂರದಲ್ಲಿ ಹೆಣ್ಣುಮಕ್ಕಳೇ ನಡೆಸುತ್ತಿದ್ದ ಮ್ಯಾಗಿ ಪಾಯಿಂಟ್ ನೋಡಿ ಹೊಟ್ಟೆಯೊಳಗೂ ತಾಳವಾದ್ಯ ಮೇಳ ಶುರುವಾಯ್ತು. ಗೊತ್ತಿಲ್ಲದೆಯೇ ನಮ್ಮ ಪಾದಗಳು ಅತ್ತ ಚಲಿಸಿದವು. ಗ್ರಾಹಕರ ಗದ್ದಲದ ನಡುವೆಯೂ ಆ ಕ್ಯಾಂಟೀನ್ ಮಾಲೀಕರಾದ ರಾಮಕಲಿ ಠಾಕೂರ್, ಅವರ ಮಗಳು ಮೀನಾ, ಸೊಸೆ ಗೀತಾ ಆತ್ಮೀಯ ನಗೆ ನಕ್ಕು, ಬೇಯುತ್ತಿರುವ ಮ್ಯಾಗಿಯ ಹಬೆಯ ನಡುವೆ ಮಾತಾದರು. ಹಿಮ ಬಿದ್ದ ಜಾಗ, ಆಟದ ಜಾಗ ಎಲ್ಲವೂ ಖಾಸಗಿ ಆಸ್ತಿಯಂತೆ. ಅಲ್ಲಿ ಬಾಡಿಗೆ ತೆಗೆದುಕೊಂಡು ಮ್ಯಾಗಿ ಅಂಗಡಿ ಇಟ್ಟುಕೊಂಡಿದ್ದಾರೆ. ಪ್ರವಾಸಿಗರು ಬರುವ ಸಮಯದಲ್ಲಿ ಇಲ್ಲಿ ವ್ಯಾಪಾರ ಮಾಡುತ್ತಾರೆ, ಉಳಿದ ಸಮಯದಲ್ಲಿ ಕೃಷಿಯ ಕೆಲಸ ಇದ್ದೇ ಇರುತ್ತದೆ.

‘ಪ್ರವಾಸಿಗರೇ ನಮಗೆ ಅನ್ನದಾತರು. ಹಾಗೆಯೇ ಕೃಷಿಯೂ ನಮಗೆ ಜೀವನಾಧಾರ. ಆಲೂಗಡ್ಡೆ, ಹೂಕೋಸು, ಬದನೆಕಾಯಿಗಳನ್ನು ಬೆಳೆಯುತ್ತೇವೆ. ಮಂಜು ಇದ್ದಷ್ಟು ಪ್ರವಾಸಿಗರು ಹೆಚ್ಚು ಬರುತ್ತಾರೆ. ಮಾರ್ಚ್, ಏಪ್ರಿಲ್ ತಿಂಗಳಿನಲ್ಲಿ ಪ್ರವಾಸಿಗರ ಸಂಖ್ಯೆ ಜಾಸ್ತಿ. ಎಲ್ಲ ಮಳೆಯ ದಯೆ’ ಎಂದು 80ರ ವೃದ್ಧೆ ರಾಮಕಲಿ ಠಾಕೂರ್ ಆಕಾಶದತ್ತ ಕೈಮುಗಿದರು.

‘ಈಗ ಊರಿನಲ್ಲಿ ಎಲ್ಲರಿಗೂ ಆಧಾರ್ ಕಾರ್ಡ್ ಸಿಕ್ಕಿದೆ. ಗಂಡುಮಕ್ಕಳೆಲ್ಲ ಪೇಟೆಯಲ್ಲಿ ಸಣ್ಣಪುಟ್ಟ ಕೆಲಸ ಮಾಡ್ತಾರೆ. ಅನುಕೂಲಗಳು ಮೊದಲಿಗಿಂತಲೂ ಹೆಚ್ಚಿವೆ. ಆದರೆ, ಜನರ ನಡುವಿನ ಪ್ರೀತಿಯ ಎಳೆಗಳು ಸಡಿಲವಾಗಿವೆ. ಯಾಕೋ ಮೊದಲಿನ ಕಾಲವೇ ಹೆಚ್ಚು ಚೆನ್ನಾಗಿತ್ತು ಅನಿಸುತ್ತದೆ’ ಎಂದು ಸುಕ್ಕುಗಟ್ಟಿದ ಮುಖದಲ್ಲಿ ಮಂದಹಾಸ ಮೂಡಿಸಿದರು.

ಜೀಪ್, ನಡಿಗೆ, ಕುದುರೆ ಸವಾರಿ ಹೀಗೆ ಒಂದೇ ದಿನ ಹಲವು ಬಗೆಯಲ್ಲಿ ಕುಫ್ರಿ ಎಂಬ ಪ್ರಶಾಂತತೆಯ ಗಮ್ಯ ತಲುಪಿದ್ದನ್ನು ಸಣ್ಣ ಆಯಾಸದೊಂದಿಗೆ ನೆನೆದು ಖುಷಿ ಪಡುತ್ತಿರುವಾಗಲೇ, ಮೇಘದೂತ ಮಂಜಿನ ಹೂಮಳೆ ಸುರಿಸಿದ. ಪಟಪಟ ಬೀಳುತ್ತಿದ್ದ ಮಂಜಿನ ಸಣ್ಣ ಸಣ್ಣ ತುಣುಕುಗಳಿಗೆ ಬಾಯೊಡ್ಡುತ್ತಲೇ ಮರಳಿ ಹೊರಡುವ ಜೀಪ್ ಏರಿದೆವು. ಅಲ್ಲಿ ಗುಡ್ಡದ ತುದಿಯಲ್ಲಿ, ಕಣಿವೆಯ ಹಾದಿಯಲ್ಲಿ ದೀಪಕ್ ಕುದುರೆ ಸಮೇತನಾಗಿ ನಮಗೆ ಕಾಯುತ್ತಿದ್ದ.

ಪ್ರತಿಕ್ರಿಯಿಸಿ: **feedback@sudha.co.in**

